ಪ್ರಶಸ್ತಿ ಹಣವನ್ನು ತ್ಯಾಗ ಮಾಡಿದ ಪರಿಸರ ಪ್ರೇಮಿ

ಲಕ್ಷ ರೂ.ಗಳನ್ನು ಬಡ ರೈತ ಹಾಗೂ ಪರಿಸರ ಸಂರಕ್ಷಣೆಯ ಸಂಸ್ಥೆಗಳಿಗೆ ಹಂಚಿದ ಡಾ.ಸಿ.ಎನ್.ಮೃತ್ಯುಂಜಯಪ್ಪ

ಮೈಸೂರು,ಪಿ.೨೬– ವೃಕ್ಷಗಳನ್ನು ಮಗುವನ್ನು ಕಾಳಜಿ ಮಾಡುವಂತೆ ಸಂರಕ್ಷಿಸಿ, ನೂರಾರು ಬಗೆಯ ಹಣ್ಣುಗಳನ್ನು ಬೆಳೆಸಿ ಸಾಧನೆ ಮಾಡಿದ ಪರಿಸರ ಪ್ರೇಮಿಯೊಬ್ಬರು, ತಮಗೆ ಸಂದ ರಾಷ್ಟ್ರೀಯ ಮಟ್ಟದ ಪ್ರಶಸ್ತಿಯ ಲಕ್ಷ ರೂ.ಗಳನ್ನು ಕಡು ಬಡತನದ ಬೇಗೆಯಲ್ಲಿರುವ ರೈತರೊಬ್ಬರಿಗೆ ಹಾಗೂ ಪರಿಸರ ಸಂರಕ್ಷಣೆಯ ಕೆಲಸ ಮಾಡುತ್ತಿರುವ ಸಂಸ್ಥೆಗಳಿಗೆ ಹಂಚುವ ಮೂಲಕ ದುಡ್ಡೇ ದೊಡ್ಡಪ್ಪ ಅಲ್ಲ; ಮಾನವೀಯ ಅಂತಃಕರಣದ ಮುಂದೆ ಅದೂ ಅಲ್ಪ ಎಂಬುದನ್ನು ಸಮಾಜಕ್ಕೆ ಸಾರಿದ್ದಾರೆ.

ಮಳವಳ್ಳಿ ತಾಲ್ಲೂಕು ದೊಡ್ಡೇಬಾಗಿಲು ಮೂಲದ ಹಾಗೂ ಎಚ್.ಡಿ.ಕೋಟೆ ತಾಲ್ಲೂಕು ಸರಗೂರನ್ನು ತಮ್ಮ ವೈದ್ಯ ವೃತ್ತಿಯ ಕರ್ಮಭೂಮಿಯನ್ನಾಗಿ ಮಾಡಿಕೊಂಡಿದ್ದು, ಈಗ ಶ್ರೀರಾಮಮಠರ ನಿವಾಸಿಯಾಗಿರುವ ಡಾ.ಸಿ.ಎನ್. ಮೃತ್ಯುಂಜಯಪ್ಪ ಅವರೇ ಇಂತಹ ಅಪರೂಪದ ಮಾದರಿ ಪರಿಸರ ಸಂರಕ್ಷಕ. ಅವರಿಗೆ ಇತ್ತೀಚೆಗೆ ಪ್ಲಾಂಟ್ ಜಿನೋಂ ಸೇವಿಯರ್ ಕಮ್ಯುನಿಟಿ ರಾಷ್ಟ್ರೀಯ ಪ್ರಶಸ್ತಿಯನ್ನು ಬಿಹಾರದ ಚಂಪಾರಣ್ಯ ಜಿಲ್ಲೆಯ ಮೋತಿಹಾರ್‌ನಲ್ಲಿ ನಡೆದ ಕಾರ್ಯಕ್ರಮದಲ್ಲಿ ಕೇಂದ್ರ ಸಚಿವರು ಪ್ರದಾನ ಮಾಡಿದ್ದರು.

ಪ್ರಶಸ್ತಿಯು ೧.೫೦ ಲಕ್ಷ ರೂ. ನಗದು, ಸ್ಮರಣಿಕೆ ಹಾಗೂ ಪ್ರಶಸ್ತಿ ಪತ್ರವನ್ನು ಒಳಗೊಂಡಿತ್ತು. ಪ್ರಶಸ್ತಿಯ ಮೊತ್ತವನ್ನು ಯಾವ ರೀತಿ ಸಮಾಜ, ಪರಿಸರದ ಏಳಿಗೆಗೆ ಪೂರಕವಾಗಿ ಬಳಸಬೇಕು ಎಂಬುದನ್ನು ಕೂಡ ಆಪ್ತೂತ್ತಿಗಾಗಲೇ ಮೃತ್ಯುಂಜಯಪ್ಪ ಮತ್ತು ಅವರ ಪತ್ನಿ ಸುಧಾ ಮೃತ್ಯುಂಜಯಪ್ಪ ನಿರ್ಧರಿಸಿದ್ದರು.

ಅದರ ಪರಿಣಾಮವಾಗಿ ಕಡು ಬಡವರಾಗಿದ್ದರೂ ಮರಗಿಡಗಳನ್ನು ಪೋಷಿಸಬೇಕು ಹಾಗೂ ಕೃಷಿ ಮಾಡಬೇಕೆಂಬ ಛಲ ಹೊಂದಿರುವ ಮೂಡುಬಿದಿರೆ ಸಮೀಪದ ಟಾಕೋಡುವಿನ ಕೃಷಿಕ ಎಡ್ಡರ್ ರೆಬೆಲ್ಲೊ ಅವರಿಗೆ ಆ ಪ್ರಶಸ್ತಿ ಹಣದಲ್ಲಿ ೧ ಲಕ್ಷ ರೂ. ಸಹಾಯ ಮಾಡಿದ್ದಾರೆ. ಹಾಗೆಯೇ ಮೈಸೂರಿನ ಜಯಲಕ್ಷ್ಮೀಪುರಂನಲ್ಲಿ ಮಹಾಜನ ಕಾಲೇಜು ಸಮೀಪದ ಸಾಯಿ ವಿದ್ಯಾ ಸಂಸ್ಥೆಗೆ ಮರಗಳ ಸಂರಕ್ಷಣೆ ಮಾಡಲೆಂದು ೫೦ ಸಾವಿರ ರೂ. ಕೊಡುಗೆ ನೀಡಿದ್ದಾರೆ.

ಎಡ್ಡರ್ಡ್ ಅವರು ಸುಮಾರು ನಾಲ್ಕು ವರ್ಷದ ಹಿಂದೆ ಪತ್ರಿಕೆಯೊಂದರಲ್ಲಿ ಮೃತ್ಯುಂಜಯಪ್ಪ ಅವರ ಪರಿಸರ ಪ್ರೇಮ ಕುರಿತು ಪ್ರಕಟವಾಗಿದ್ದ ವರದಿಯನ್ನು ಓದಿ, ಕಣ್ಣಾರೆ ಕಾಣುವ ಆಸೆಯಿಂದ ಮೈಸೂರಿಗೆ ಬಂದು ಇವರ ಪರಿಚಯ ಮಾಡಿಕೊಂಡಿದ್ದರು.

ಅಲ್ಲದೆ, ಪ್ರಶಸ್ತಿ ಘೋಷಣೆಯಾದ ಸಮಯದಲ್ಲಿ, ಸಾರ್, ನನಗೂ ಯಾರಾದರೂ ಪ್ರಶಸ್ತಿ ಕೊಡುವವರಿದ್ದರೆ ನೋಡಿ. ಒಂದಿಷ್ಟು ದುಡ್ಡು ಬಂದರೆ ಜಮೀನಿನಲ್ಲಿ ಕೊಳವೆ ಬಾವಿ ಹಾಕಿಸಿ ಒಳ್ಳೆಯ ಮರಗಿಡಗಳನ್ನು ಬೆಳೆಸುತ್ತೇನೆ ಎಂದು ಗಂಭೀರವಾಗಿಯೇ ಹೇಳಿದ್ದರಂತೆ.

ಅದು ಮೃತ್ಯುಂಜಯಪ್ಪ ಮತ್ತು ಅವರ ಪತ್ನಿ ಸುಧಾ ಅವರು ಪ್ರಶಸ್ತಿ ಸ್ವೀಕಾರಕ್ಕಾಗಿ ಬಿಹಾರಕ್ಕೆ ವಿಮಾನದಲ್ಲಿ ತೆರಳುವ ಸಂದರ್ಭದಲ್ಲಿ ಚರ್ಚೆಗೆ ಬಂದಿದೆ. ಸಸಿ, ತರುಲತೆಗಳನ್ನೇ ಮನುಷ್ಯ ಪ್ರೇಮದಿಂದ ನೋಡುವ ದಂಪತಿ, ಆಗಲೇ ಪ್ರಶಸ್ತಿಯ ಹಣವನ್ನು ಈ ಮೇರೆಗೆ ಎರಡು ಕೆಲಸಗಳಿಗೆ ಉಪಯೋಗಿಸಲು ನಿರ್ಧರಿಸಿಟ್ಟರು.

ಅದರಂತೆ ಬುಧವಾರ ತಮ್ಮ ಮನೆಗೆ ಎಡ್ಡರ್ಡ್ ಅವರನ್ನು ಬರಮಾಡಿಕೊಂಡರು. ಸಾಯಿ ವಿದ್ಯಾಸಂಸ್ಥೆಯವರನ್ನು ಕರೆಸಿಕೊಂಡರು. ಸರಳ ಕಾರ್ಯಕ್ರಮದಲ್ಲಿ ಅವರಿಗೆ 'ಆಂದೋಲನ' ದಿನಪತ್ರಿಕೆ ಸಂಪಾದಕ ರಾಜಶೇಖರ ಕೋಟಿ ಅವರ ಮೂಲಕ ಪ್ರಶಸ್ತಿ ಹಣದ ಒಂದು ಲಕ್ಷ ಹಾಗೂ ೫೦ ಸಾವಿರ ರೂ. ಮೊತ್ತದ ಪ್ರತ್ಯೇಕ ಚೆಕ್‌ಗಳನ್ನು ಆ ಪರಿಸರ ಪ್ರಿಯರಿಗೆ ದೇಣಿಗೆಯಾಗಿ ಕೊಡಿಸಿದರು.

ಕೊಪ್ಪದ ಶ್ರೀಮಂತ ರೈತ ಡೇನಿಯಲ್ ಖುಲಾಸೊ, ಸಾಯಿ ವಿದ್ಯಾಸಂಸ್ಥೆಯ ಅಧ್ಯಕ್ಷ ಪ್ರಭುಪ್ರಸಾದ್, ಕಾರ್ಯದರ್ಶಿ ಸತೀಶ್, ನಿವೃತ್ತ ಪ್ರಾಧ್ಯಾಪಕ ಪ್ರೊ.ಚಂದ್ರಶೇಖರ್, ಸರಗೂರು ಜೆ.ಎನ್.ಎಸ್ ಶಾಲೆಯ ಮುಖ್ಯೋಪಾಧ್ಯಾಯ ಅಂಬೂ ಪಾಷ ಮುಂತಾದವರು ಈ ಅಪರೂಪದ ಕಾರ್ಯಕ್ರಮಕ್ಕೆ ಸಾಕ್ಷಿಯಾದರು.

ಅಂಗಳದಲ್ಲೇ ನೂರಾರು ಬಗೆಯ ಹೂ ಹಣ್ಣುಗಳಿಂದ ಬಳಕುವ ಗಿಡಗಳು: ವೃತ್ತಿಯಲ್ಲಿ ವೈದ್ಯರಾದರೂ ಕೃಷಿ, ಅದರಲ್ಲಿಯೂ ವೃಕ್ಷ ಸಂರಕ್ಷಣೆ ಬಗ್ಗೆ ಅಪಾರ ಪ್ರೀತಿಯ ಮೃತ್ಯುಂಜಯಪ್ಪ ಅವರು ತಮ್ಮ ಮನೆಯ ಹಿತ್ತಲಿನ ಕೈತೋಟದಲ್ಲಿ ಒಂದೇ ಮಾವಿನ ಗಿಡದಲ್ಲಿ ಕಸಿ ಮಾಡಿ ನೂರು ಬಗೆಯ ಹಣ್ಣುಗಳನ್ನು ಬೆಳೆದಿದ್ದಾರೆ. ಇಷ್ಟೇ ಅಲ್ಲದೆ, ಇನ್ನು ವಿವಿಧ ಬಗೆಯ ಮರಗಿಡಗಳನ್ನು ಸಾಕುತ್ತಿದ್ದಾರೆ! ೯೦x೧೨೦ ಅಡಿ ಜಾಗದಲ್ಲಿ ೨೦೦ ಬಗೆಯ ಹೂ ಹಣ್ಣುಗಳ ಸಸಿಗಳು ಅಲ್ಲಿವೆ. ಅಮೆರಿಕ, ಆಸ್ಟ್ರೇಲಿಯಾ, ಕೆನಡಾ ಸೇರಿದಂತೆ ವಿದೇಶಗಳ ಹಲವಾರು ವಿಧದ ಗಿಡಮರಗಳನ್ನು ಕೂಡ ಮನೆಯ ಅಂಗಳದಲ್ಲೇ ಬೆಳೆಸಿದ್ದಾರೆ. ಮೃತ್ಯುಂಜಯಪ್ಪ ಹಾಗೂ ಅವರ ಪತ್ನಿ ಸುಧಾ ಅಂದರೆ ಪರಿಸರ ರಕ್ಷಣೆಗಾಗಿಯೇ ಇರುವ ಯೋಧರು ಎಂಬಂತೆ ಭಾಸವಾಗುತ್ತದೆ. ಅವರು ವೃಕ್ಷ ರಾಶಿಯನ್ನು ಬೆಳೆಸುತ್ತಲೇ ತಾವೂ ಅವುಗಳ ಎತ್ತರಕ್ಕೆ ಜಿಗಿದಿದ್ದಾರೆ. ಇಡೀ ದೇಶವೇ ಕರ್ನಾಟಕದತ್ತ ಕಣ್ಣಿಟ್ಟು ನೋಡುವಂತೆ ಮಾಡಿದ್ದಾರೆ. ಭಾಷೆ ಬೇರೆ ಭಾವ ಒಂದೇ ನಾವು ಭಾರತೀಯರು ಎಂಬ ಸಂದೇಶವನ್ನು ಕೊಟ್ಟಿದ್ದಾರೇನೋ ಎನಿಸುತ್ತದೆ.

ಮೈಸೂರಿನ ಶ್ರೀರಾಮಮಠರದಲ್ಲಿ ವೃಕ್ಷ ಸಂರಕ್ಷಕ ಡಾ.ಸಿ.ಎನ್.ಮೃತ್ಯುಂಜಯಪ್ಪ ಅವರು ತಮ್ಮ ನಿವಾಸದಲ್ಲಿ ಪ್ಲಾಂಟ್ ಜಿನೋಂ ಸೇವಿಯರ್ ಕಮ್ಯುನಿಟಿ ರಾಷ್ಟ್ರೀಯ ಪ್ರಶಸ್ತಿಯ ೧.೫೦ ಲಕ್ಷ ರೂ. ಮೊತ್ತದ ಚೆಕ್‌ಗಳನ್ನು 'ಆಂದೋಲನ' ದಿನಪತ್ರಿಕೆ ಸಂಪಾದಕ ರಾಜಶೇಖರ ಕೋಟಿ ಅವರ ಮೂಲಕ ಎಡ್ಡರ್ ರೆಬೆಲ್ಲೊ, ಸಾಯಿ ವಿದ್ಯಾ ಸಂಸ್ಥೆಯ ಪ್ರಭುಪ್ರಸಾದ್ ಅವರಿಗೆ ವಿತರಿಸಿದರು. ಸುಧಾ ಮೃತ್ಯುಂಜಯಪ್ಪ, ಸತೀಶ್, ಡೇನಿಯಲ್, ಪ್ರೊ.ಚಂದ್ರಶೇಖರ್, ಅಂಬೂ ಪಾಷ ಚಿತ್ರದಲ್ಲಿದ್ದಾರೆ.

ಮಾವು ಭಾರತದ ಆಸ್ತಿ. ಅಮೆರಿಕದ ಮಾವಿಗೂ ಭಾರತಕ್ಕೂ ಸಂಬಂಧಿಸಿದ ಹೆಸರಿದೆ. ಪರಿಸರ ಸಂರಕ್ಷಣೆಯ ಮೂಲಕ ಜೀವ ವೈವಿಧ್ಯತೆಯನ್ನೂ ಉಳಿಸುವ ದಾರಿಗಳಿವೆ. ಅದರಲ್ಲಿಯೂ ಒಂದೇ ಮಾವಿನ ಗಿಡದಲ್ಲಿ ನೂರು ಬಗೆಯ ಹಣ್ಣುಗಳನ್ನು ಬೆಳೆಯುವ ಮೂಲಕ ಇತರರು ಅದನ್ನು ಅನುಸರಿಸಬಹುದು ಎಂಬುದನ್ನು ತೋರಿಸುವ ಪ್ರಯತ್ನ ಇದು.

ಎಡ್ಡರ್ಡ್ ಅವರು ಬಡವರಾದರೂ ಅವರಿಗಿರುವ ೧.೧೦ ಎಕರೆ ಜಮೀನಿನಲ್ಲಿ ಹಣ್ಣಿನ ಮರಗಳನ್ನು ಬೆಳೆಸಲು ಉತ್ತಮಕರಾಗಿದ್ದಾರೆ. ಅವರಿಗೆ ಕೊಳವೆಬಾವಿಯ ಆನತ್ತಪತ್ತಿ. ಹಾಗೆಯೇ ಸಾಯಿ ವಿದ್ಯಾಸಂಸ್ಥೆಯವರು ಕೂಡ ಪರಿಸರ ಸಂರಕ್ಷಣೆಗೆ ಒತ್ತು ನೀಡಿದ್ದಾರೆ.

–ಡಾ.ಸಿ.ಎನ್.ಮೃತ್ಯುಂಜಯಪ್ಪ

ಮನುಷ್ಯ ತನ್ನ ಸಂಪಾದನೆಯ ಅಲ್ಪಭಾಗವನ್ನಾದರೂ ಸಮಾಜದ ಅಭಿವೃದ್ಧಿಗೆ ಕೊಡಬೇಕು. ಅದೇ ಮಾನವೀಯತೆಗೆ ಹಿಡಿದ ಕನ್ನಡಿಯಾಗುತ್ತದೆ. ಮೃತ್ಯುಂಜಯಪ್ಪ ಅವರು ೪೦ ವರ್ಷಗಳಿಂದ ಪರಿಸರವನ್ನು ಉಳಿಸಿ, ಬೆಳೆಸುವ ನಿಟ್ಟಿನಲ್ಲಿ ಶ್ರಮಿಸುತ್ತಿದ್ದಾರೆ. ಅಲ್ಲದೆ, ಪ್ರಶಸ್ತಿಯ ಮೊತ್ತವನ್ನು ಪರಿಸರ ಸ್ನೇಹಿ ಜನರಿಗೆ ವಿತರಿಸುವ ಮೂಲಕ ಇತರರಿಗೆ ಮಾದರಿಯಾಗಿದ್ದಾರೆ. ಇಂತಹ ಡಾ.ಮೃತ್ಯುಂಜಯಪ್ಪ ಅವರನ್ನು ನಮ್ಮ ರಾಜ್ಯ ಸರ್ಕಾರವೂ ಗುರುತಿಸಲಿ.

–ರಾಜಶೇಖರ ಕೋಟಿ

ಮೂರ್ಕಾಲ್ಕು ವರ್ಷಗಳಿಂದ ಮೃತ್ಯುಂಜಯಪ್ಪ ಅವರ ಸ್ನೇಹ ವಲಯದಲ್ಲಿದ್ದೇನೆ. ನಮ್ಮ ಜಮೀನಿನಲ್ಲಿ ಸಾವಯವ ಕೃಷಿ ಕೈಗೊಂಡಿದ್ದೇನೆ. ಸಾಧ್ಯವಾದಷ್ಟು ಪರಿಸರ ಸ್ನೇಹಿ ಬದುಕನ್ನೇ ಮೈಗೂಡಿಸಿಕೊಂಡಿದ್ದೇನೆ. ಮೃತ್ಯುಂಜಯಪ್ಪ ಅವರ ಬಗ್ಗೆ ಲೇಖನ ಓದಿ ಆಶ್ಚರ್ಯವಾಯಿತು. ಅವರನ್ನು ನೋಡಲೇಬೇಕೆಂದು ಹುಡುಕಿಕೊಂಡು ಬಂದಿದ್ದೆ. ಇವತ್ತು ನನಗೆ ಧನಸಹಾಯ ಮಾಡುವ ಮೂಲಕ ಪರಿಸರ ಉಳಿಸುವ ನನ್ನ ಆಸೆಗೆ ನೀರೆರೆದಿದ್ದಾರೆ.

–ಎಡ್ಡರ್ಡ್ ರೆಬೆಲ್ಲೊ

ಮಲಬಾರ್ ಗೋಲ್ಡ್ & ಡೈಮಂಡ್ಸ್‌ನಲ್ಲಿ ಅಕ್ಷಯ ತೃತೀಯ ಕೊಡುಗೆ

ಮೈಸೂರು,ಪಿ.೨೬– ಮಲಬಾರ್ ಗೋಲ್ಡ್ ಅಂಡ್ ಡೈಮಂಡ್ಸ್ ದೇಶದ ಅತಿ ದೊಡ್ಡ ರಿಟೈಲ್ ಚಿನ್ನದ ವ್ಯಾಪಾರಿಗಳಲ್ಲೊಬ್ಬರಾಗಿ, ಸಾಂಪ್ರದಾಯಿಕ ಮತ್ತು ನವೃತೈಲಿಯ ಅಕ್ಷಯ ತೃತೀಯದ ಇತ್ತೀಚಿನ ಆಭರಣ ಸಂಗ್ರಹಗಳನ್ನು ವಿಶೇಷ ಬೆಲೆಯಲ್ಲಿ ನೀಡುತ್ತಿದ್ದಾರೆ. ಅನ್‌ಕಟ್ ವಜ್ರಾಭರಣಗಳು, ಸಾಂಪ್ರದಾಯಿಕ ಡಿಸೈನ್ ಆಭರಣ, ಅಮೂಲ್ಯ ಜೆಮ್‌ಸ್ಟೋನ್ ಆಭರಣ ಮತ್ತು ಮೈನ್ ಹಗುರ ತೂಕದ ವಜ್ರಾಭರಣ ಇವೆಲ್ಲವೂ ಸಮಗ್ರ ಸಂಗ್ರಹದಲ್ಲಿ ಸೇರಿವೆ.

ಗ್ರಾಹಕರು ದೇಶದೆಲ್ಲೆಡೆಯ ಮಲಬಾರ್ ಗೋಲ್ಡ್ ಅಂಡ್ ಡೈಮಂಡ್ಸ್ ಶೋರೂಂಗೆ ಭೇಟಿ ನೀಡಿ, ತಮ್ಮ ನೆಚ್ಚಿನ ಆಭರಣವನ್ನು ಮುಂಗಡವಾಗಿ ಕಾಯ್ದಿರಿಸಿ ಮತ್ತು ಉಚಿತವಾಗಿ ಬೆಳ್ಳಿಯನ್ನು ಪಡೆಯಬಹುದು. ಬುಕ್ಕಿಂಗ್ ಪಿ.೨೭ರವರೆಗೆ ಮಾತ್ರ.

ಗ್ರಾಹಕರು ಆಭರಣವನ್ನು ತಾವು ಕಾಯ್ದಿರಿಸಿದ ಬೆಲೆ ಅಥವಾ ಪ್ರಸ್ತುತ ಬೆಲೆ, ಇದರಲ್ಲಿ ಕಡಿಮೆಯಿರುವ ಬೆಲೆಯಲ್ಲಿ ಪಡೆಯಿವರು. ಈ ಹಬ್ಬದ ಸಮಾರಂಭದಲ್ಲಿ ಮಲಬಾರ್ ಗೋಲ್ಡ್ ಅಂಡ್ ಡೈಮಂಡ್ಸ್ ಎಸ್‌ಬಿಐ ನೊಂದಿಗೆ ಸೇರಿ, ಪಿ.೨೯ರವರೆಗೆ ಎಸ್‌ಬಿಐ ಕ್ರೆಡಿಟ್ ಕಾರ್ಡ್ಸ್/ಡೆಬಿಟ್ ಕಾರ್ಡ್ ಬಳಸಿ ಕನಿಷ್ಠ ರೂ. ೨೫,೦೦೦ ವ್ಯವಹಾರ ಮಾಡುವ ಗ್ರಾಹಕರಿಗೆ ಶೇ.೫ರಷ್ಟು ನಗದು ಹಿಂಪಡೆಯುವ ಅಧಿಕ ಪ್ರಯೋಜನವನ್ನು ನೀಡಲಾಗುತ್ತಿದೆ.

ಅಕ್ಷಯ ತೃತೀಯದಂದು ಹೆಚ್ಚಾಗಿ ಆಗಮಿಸುವ ಗ್ರಾಹಕರನ್ನು ನಿರ್ವಹಿಸಲು ಮಲಬಾರ್ ಗೋಲ್ಡ್ ಅಂಡ್ ಡೈಮಂಡ್ಸ್ ಅಗತ್ಯ ವಾಣಾಟಗಾರರನ್ನು ನಿಯೋಜಿಸಲಿದ್ದು, ಅಧಿಕ ಸಂಖ್ಯೆಯ ಕೌಂಟರ್ಸ್ ತೆರೆಯಲಾಗುವುದು. ಚಿನ್ನದ ನಾಣ್ಯಗಳನ್ನು ಖರೀದಿಸಲೆಂದೇ ವಿಶೇಷ ಕೌಂಟರ್ಸ್‌ಗಳನ್ನು ಇಡಲಾಗಿದೆ. ಅಕ್ಷಯ ತೃತೀಯ ದಿನದಂದು ನಮ್ಮ ಎಲ್ಲಾ ಮಲಬಾರ್ ಗೋಲ್ಡ್ ಅಂಡ್ ಡೈಮಂಡ್ ಶೋರೂಂಗಳು ಬಹಳ ಬೇಗನೆ ತೆರೆದಿರುತ್ತವೆ ಎಂದು ಸಂಸ್ಥೆಯ ಮೂಲಗಳು ತಿಳಿಸಿವೆ.

ಮಳಲಿ ವಸಂತಕುಮಾರ್‌ಗೆ 'ಚಿಣ್ಣರ ಚಂದಿರ' ಪ್ರಶಸ್ತಿ

ಮೈಸೂರು,ಪಿ.೨೬– ಧಾರವಾಡದ ಕರ್ನಾಟಕ ಬಾಲ ವಿಕಾಸ ಅಕಾಡೆಮಿಯ ಸಾಹಿತಿ ಡಾ.ಮಳಲಿ ವಸಂತಕುಮಾರ್ ಅವರ 'ಹಕ್ಕಿಗಳ ಜೀವಭಾವ' ಪುಸ್ತಕಕ್ಕೆ ೨೦೧೪ನೇ ಸಾಲಿನ 'ಚಿಣ್ಣರ ಚಂದಿರ' ಗೌರವ ಪ್ರಶಸ್ತಿ ನೀಡಿದೆ.

ಡಾ.ಮಳಲಿ ಅವರ ಹಕ್ಕಿಗಳ ಜೀವಭಾವ ಹಕ್ಕಿಗಳೇ ಪೂರ್ಣವಾಗಿ ಪಾತ್ರವಾಗಿರುವ ನಾಟಕ ಕೃತಿ. ೨೦೧೪ರಲ್ಲಿ ಪ್ರಕಟವಾದ ಈ ಕೃತಿ ಪೂರ್ಣವಾಗಿ ಪರಿಸರ ಪ್ರಜ್ಞೆಯನ್ನು ಒಳಗೊಂಡಿದ್ದು, ಡಾ.ದೇವೇಗೌಡ ಅವರ ಮುನ್ನುಡಿಯ ಬರಹವಿದೆ.

ಮೇ ಮೂರನೆಯ ವಾರದಲ್ಲಿ ಧಾರವಾಡದಲ್ಲಿ ನಡೆಯುವ ಸಮಾರಂಭದಲ್ಲಿ ಡಾ.ಮಳಲಿ ವಸಂತಕುಮಾರ್ ಅವರಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಪ್ರಶಸ್ತಿ ಪ್ರದಾನ ಮಾಡಲಿದ್ದಾರೆ ಎಂದು ಅಕಾಡೆಮಿಯ ಅಧ್ಯಕ್ಷ ವೇದವ್ಯಾಸ ಹ.ಕೌಲಿಗಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಗ್ರಂಥ ಪುರಸ್ಕಾರಕ್ಕೆ 'ಬೌದ್ಧ ಧರ್ಮದರ್ಶನ' ಕೃತಿ ಆಯ್ಕೆ

ಮೈಸೂರು,ಪಿ.೨೬– ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾನಿಲಯವು ಸಂಸ್ಕೃತ ಲೇಖಕರನ್ನು ಪ್ರೋತ್ಸಾಹಿಸಲು ಪ್ರಾರಂಭಿಸಿರುವ ಗ್ರಂಥ ಪುರಸ್ಕಾರಕ್ಕೆ ೨೦೧೫ನೇ ಸಾಲಿನಲ್ಲಿ ಡಾ.ಶರಣ್ಣಂದ್ರ ಸ್ವಾಮೀಜಿ ಅವರ ಇಂಡಾಲಜಿ ಗ್ರಂಥ ಪ್ರಕಾರದಲ್ಲಿ 'ಬೌದ್ಧ ಧರ್ಮದರ್ಶನ' ಕೃತಿಯನ್ನು ಆಯ್ಕೆ ಮಾಡಿದ್ದಾರೆ.

ಮೇ ೩ರಿಂದು ಸಂಜೆ ೪ ಗಂಟೆಗೆ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಕೃಷ್ಣರಾಜ ಪರಿಷತ್ ಮಂದಿರದಲ್ಲಿ ನಡೆಯುವ ಸಮಾರಂಭದಲ್ಲಿ ಗ್ರಂಥ ಪುರಸ್ಕಾರ ಪ್ರದಾನ ಮಾಡಲಾಗುವುದು ಎಂದು ಸಂಸ್ಕೃತ ವಿಶ್ವವಿದ್ಯಾನಿಲಯದ ಕುಲಪತಿಗಳು ತಿಳಿಸಿದ್ದಾರೆ.

ನಾಳೆ ವಿದ್ಯುತ್ ನಿಲುಗಡೆ

ಮೈಸೂರು,ಪಿ.೨೬– ಕರ್ನಾಟಕ ವಿದ್ಯುತ್ ಪ್ರಸರಣ ನಿಗಮದ ೬೬/೧೧ ಕೆ.ವಿ. ಆಯರಹಳ್ಳಿ ವಿದ್ಯುತ್ ವಿತರಣಾ ಕೇಂದ್ರದಲ್ಲಿ ತುರ್ತು ನಿರ್ವಾಹಣಾ ಕಾಮಗಾರಿ ಹಮ್ಮಿಕೊಳ್ಳಲಾಗಿದೆ.

ಪಿ. ೨೮ರಂದು ಬೆಳಗ್ಗೆ ೧೦ರಿಂದ ಸಂಜೆ ೬ರವರೆಗೆ ಆಯರಹಳ್ಳಿ, ರಾಯನಹುಂಡಿ, ಕುಂಬ್ರಹಳ್ಳಿ ಮಠ, ಸೋಮೇಶ್ವರಪುರ, ಬಸಹಳ್ಳಿಹುಂಡಿ, ದೇವಲಾಪುರ, ಚಿಕ್ಕಗೌಡನಹುಂಡಿ, ಕುಂಬ್ರಹಳ್ಳಿ, ಮರಿಗೌಡನಹುಂಡಿ ಹಾಗೂ ಕಿರಾಳು ಸುತ್ತಮುತ್ತಲಿನ ಪ್ರದೇಶಗಳಲ್ಲಿ ವಿದ್ಯುತ್ ನಿಲುಗಡೆಯಾಗಲಿದೆ ಸಾರ್ವಜನಿಕರು ಸಹಕರಿಸುವಂತೆ ಅವರು ಕೋರಿದ್ದಾರೆ.

ಕೋಟೆಹುಂಡಿ ಮಹದೇವ್ ಅವರಿಗೆ ಸನ್ಮಾನ

ಮೈಸೂರು ಜಿಲ್ಲಾ ಕಾಂಗ್ರೆಸ್ ವತಿಯಿಂದ ಕರ್ನಾಟಕ ರಾಜ್ಯ ಅರಣ್ಯ ವಸತಿ ವಿಹಾರ ಧಾಮಗಳ ಆಡಳಿತ ಮಂಡಳಿ ನಿರ್ದೇಶಕರಾಗಿ ನೇಮಕವಾಗಿರುವ ಕೋಟೆಹುಂಡಿ ಎಂ.ಮಹದೇವ್ ಅವರನ್ನು ಸನ್ಮಾನಿಸಲಾಯಿತು. ಮಾಜಿ ಸಚಿವ ಪ್ರೊ.ಜಿ.ಕೆ.ಚಂದ್ರಶೇಖರ್, ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಡಾ.ಜಿ.ಜಿ.ವಿಜಯಕುಮಾರ್ ಮತ್ತಿತರರನ್ನು ಚಿತ್ರದಲ್ಲಿ ಕಾಣಬಹುದು.

ಹುತಾತ್ಮ ಯೋದರಿಗೆ ಶ್ರದ್ಧಾಂಜಲಿ

ನಕ್ಷಲರ ಗುಂಡಿಗೆ ಬಲಿಯಾದ ಯೋಧರಿಗೆ ಮೈಸೂರಿನ ಜಾಮುಂಡಿಪುರಂನಲ್ಲಿ ಯುವ ಭಾರತ್ ಸಂಘಟನೆ ವತಿಯಿಂದ ಮೇಣದ ಬತ್ತಿ ಹಚ್ಚಿ ಶ್ರದ್ಧಾಂಜಲಿ ಸಲ್ಲಿಸಲಾಯಿತು. ಸಂಘಟನೆಯ ಸಂಜಾಲಕ ಹೋಲಿಮಂಜು, ಮಹಾನಗರಪಾಲಿಕೆ ಸದಸ್ಯ ಮ.ವಿ.ರಾಮಪ್ರಸಾದ್, ಕೆಎಂಪಿಕೆ ಅಧ್ಯಕ್ಷ ವಿಶ್ವಮ್ ಅಯ್ಯಂಗಾರ್, ಜಯ ಕರ್ನಾಟಕ ಯುವ ಪಡಪಡೆ ಅಧ್ಯಕ್ಷ ಅಜಯ್ ಶಾಸ್ತ್ರಿ, ಅಮೀರ್ ಸುರೇಶ್, ಮೈಲಾ.ವಿಜಯಕುಮಾರ್, ಸಂದೀಪ್, ಶ್ರೀಕಾಂತ್ ಕಶ್ಯಪ್, ನಿಶಾಂತ್, ಪ್ರವೀಣ್, ಅಭಿ ಮತ್ತಿತರರು ಚಿತ್ರದಲ್ಲಿದ್ದಾರೆ.

ಎಸಿಬಿ ಬಲೆಗೆ ಬಿದ್ದ ಎಸ್‌ಐ

ಲಂಚ ಸ್ವೀಕರಿಸುತ್ತಿದ್ದಾಗ ಕೊಳ್ಳೇಗಾಲ ಗ್ರಾಮಾಂತರ ಠಾಣೆಯ ಎಸ್‌ಐ ಪುಟ್ಟಸ್ವಾಮಿ ಬಂಧನ

ಕೊಳ್ಳೇಗಾಲ,ಪಿ.೨೬– ಕೊಳ್ಳೇಗಾಲ ಗ್ರಾಮಾಂತರ ಪೊಲೀಸ್ ಠಾಣೆಯ ಸಹಾಯಕ ಸಬ್‌ಇನ್‌ಸ್ಪೆಕ್ಟರ್ ಪುಟ್ಟಸ್ವಾಮಿ ಲಂಚ ಪಡೆಯುತ್ತಿದ್ದಾಗ ಭ್ರಷ್ಟಾಚಾರ ನಿಗ್ರಹ ದಳದವರ ಬಲೆಗೆ ಸಿಕ್ಕಿಬಿದ್ದಿದ್ದಾರೆ.

ಬುಧವಾರ ಸಂಜೆ ೫ ಗಂಟೆ ಸಮಯದಲ್ಲಿ ಪ್ರಕರಣವೊಂದಕ್ಕೆ ಸಂಬಂಧಿಸಿದಂತೆ, ಜಾಗೇರಿ ಗ್ರಾಮದ ಜಪಮಾಲೈ ಎಂಬವರಿಂದ ೪ ಸಾವಿರ ರೂ. ಲಂಚ ಸ್ವೀಕರಿಸುವಾಗ ಪುಟ್ಟಸ್ವಾಮಿ ಅವರನ್ನು ಭ್ರಷ್ಟಾಚಾರ ನಿಗ್ರಹದಳ ದವರು ದಾಳಿ ನಡೆಸಿ ಅವರನ್ನು ಬಂಧಿಸಿದ್ದಾರೆ.

ಕಳೆದ ತಿಂಗಳು ಜಾಗೇರಿಯಲ್